# ಸುನಿತಾ ವಿದಾಯ

**ಅಸಂಖ್ಯ ಉತ್ಸಾಹಿಗಳ ಮನದಲ್ಲಿ ಸ್ಫೂರ್ತಿ ತುಂಬಿ, ಅವರ ಹಾದಿಗೆ ಬೆಳಕಾಗಿರುವ ಗಗನಯಾನಿ ಸುನಿತಾ ವಿಲಿಯಮ್ಸ್ ನಿವೃತ್ತಿ ಘೋಷಿಸಿದ್ದಾರೆ.**

■ ರಾಘು

ಸುನಿತಾ ವಿಲಿಯಮ್ಸ್ ವಿಶ್ವ ಪ್ರಸಿದ್ಧ ಹೆಸರು. ಆ ಹೆಸರಿನ ಪೂರ್ವಾರ್ಧ ಕೇಳಿದ ಭಾರತೀಯರಿಗೆ ಸಹಜವಾಗಿ ನಂಟಿನ ವಾಸನೆ ಬಡಿಯುತ್ತದೆ. ವೈಯಕ್ತಿಕವಾಗಿ ಭಾರತೀಯ ಪರಂಪರೆಯನ್ನು ಪಾಲಿಸುವ ಅವರು ತಮ್ಮ ಯಾನದಲ್ಲಿಯೂ ಅದನ್ನು ಅನುಸರಿಸಿದ್ದಾರೆ. ‘ಬಾಹ್ಯಾಕಾಶದಲ್ಲಿ ನಿಂತು ಭೂಮಿಯತ್ತ ಒಮ್ಮೆ ನೋಡಿದರೆ, ಅಲ್ಲಿನ ಎಲ್ಲ ವಿವಾದಗಳು ಕ್ಷುಲ್ಲಕ ಎಂದೇ ಅನ್ನಿಸುತ್ತದೆ. ದೃಷ್ಟಿಯ ವಿಸ್ತಾರ ಹೆಚ್ಚಾಗುತ್ತಿರುತ್ತದೆ’ ಎನ್ನುವ ಮಾತನ್ನು ಸುನಿತಾ ವಿಲಿಯಮ್ಸ್ ಹೇಳಿದ್ದರು. ಅವರ ಆ ಮಾತಿನಲ್ಲಿ ತಮ್ಮ ವೃತ್ತಿ ಬದುಕಿನ ಪಥದಲ್ಲಿ ಮೂಡಿಸಿದ ಹೆಜ್ಜೆಗುರುತುಗಳ ಅನುಭವವನ್ನೂ ಸೇರಿಸಿದಂತೆ ಅನ್ನಿಸುತ್ತದೆ.

ಸುನಿತಾ ತಂದೆ ದೀಪಕ್ ಪಾಂಡ್ಯ ಗುಜರಾತಿನ ಮೆಹ್ಸಾನಾ ಜಿಲ್ಲೆಯ ಝುಲಾಸನ್ ಗ್ರಾಮದವರು. ಅವರು 1953ರಲ್ಲಿ ಗುಜರಾತ್‌ನಲ್ಲಿ ಇಂಟರ್ ಮೀಡಿಯೇಟ್ ಮುಗಿಸಿ, ಅಮೆರಿಕದಲ್ಲಿ ಶರೀರ ಶಾಸ್ತ್ರ ಸ್ನಾತಕೋತ್ತರ ಪದವಿ ಪಡೆಯುತ್ತಾರೆ. ಅಮೆರಿಕದಲ್ಲಿ ನೆಲೆಸಿರುವ ಯೂರೋಪಿನ ಸ್ಲೋವೆನಿಯಾ ಮೂಲದ ಉರ್ಸುಲಿನ್ ಬಾನಿ (Ursuline Bonnie) ಅವರನ್ನು ಮದುವೆಯಾಗುತ್ತಾರೆ. ಪಾಂಡ್ಯ ದಂಪತಿಯ ಮೂರನೇ ಕೂಸು ಸುನಿತಾ. ಅಮೆರಿಕದ ಯೂಕ್ಲಿಡ್ ನಗರದಲ್ಲಿ 1965 ಸೆಪ್ಟೆಂಬರ್ 19ರಂದು ಜನಿಸುತ್ತಾರೆ. ಸುನಿತಾಗೆ ಅಕ್ಕ– ಅಣ್ಣ ಇದ್ದಾರೆ.

ಭೌತವಿಜ್ಞಾನದಲ್ಲಿ ಸ್ನಾತಕ ಪದವಿಯ ಪಡೆದು, ಎಂಜಿನಿಯರಿಂಗ್ ಮ್ಯಾನೇಜ್‌ಮೆಂಟ್‌ನಲ್ಲಿ ಸ್ನಾತಕೋತ್ತರ ಪದವಿಯನ್ನು ಗಳಿಸಿದ್ದರು. 1987ರಲ್ಲಿ ನೇವಿಗೆ ಸೇರಿ ತಮ್ಮ ವೃತ್ತಿಯನ್ನು ಆರಂಭಿಸುತ್ತಾರೆ. ಸಾಹಸ ಮನೋಭಾವದ ಸುನಿತಾ ನಿರಂತರ ಕಲಿಕೆಯ ತುಡಿತ ನೌಕಾಪಡೆಯತ್ತ ಸೆಳೆಯುತ್ತದೆ. 1993ರಲ್ಲಿ ಪೈಲಟ್ ತರಬೇತಿ ಪಡೆದು ಪೈಲಟ್ ಆಗುತ್ತಾರೆ. ನೌಕಾಪಡೆಯ ಬೇರೆ ಬೇರೆ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಾರೆ. ಯುದ್ಧ ನೌಕೆಯಲ್ಲಿ ಕಾರ್ಯ ನಿರ್ವಹಿಸಿದ ಸುನಿತಾ 40 ಬಗೆಯ ಯುದ್ಧ ವಿಮಾನಗಳನ್ನು ಹಾರಿಸುತ್ತಾರೆ. ವಿವಿಧ ಜವಾಬ್ದಾರಿಗಳನ್ನು ನಿರ್ವಹಿಸಿದ ಅನುಭವ ಅವರಿಗಿತ್ತು. ಅವರನ್ನು ‘ನಾಸಾ’ (ಅಮೆರಿಕದ ಅಂತರಿಕ್ಷ ಸಂಸ್ಥೆ) ತನ್ನ ಕಾರ್ಯಚಟುವಟಿಕೆಗೆ 1998ರಲ್ಲಿ ಆಯ್ಕೆ ಮಾಡಿಕೊಳ್ಳುತ್ತದೆ. ಅಂತರಿಕ್ಷ ಯಾನದ ತರಬೇತಿ ಪಡೆದು 2006ರಲ್ಲಿ ಮೊದಲ ಬಾರಿಗೆ ಗಗನಯಾನವನ್ನು ಸುನಿತಾ ವಿಲಿಯಮ್ಸ್ ಕೈಗೊಳ್ಳುತ್ತಾರೆ. 2012ರಲ್ಲಿ ಎರಡನೇ ಬಾರಿಗೆ ಹಾರುತ್ತಾರೆ. ನಾಲ್ಕು ತಿಂಗಳ ಈ ಯಾನದಲ್ಲಿ ಆಟೋಟಗಳ ಮೂಲಕ ಬೆರಗನ್ನು ಹುಟ್ಟಿಸಿದರು. ಕೊನೆಯ ಯಾನವನ್ನು 2024ರ ಜೂನ್ ತಿಂಗಳಲ್ಲಿ ಕೈಗೊಂಡರು. ತಾಂತ್ರಿಕ ಸಮಸ್ಯೆ ಉಂಟಾದ ಕಾರಣಕ್ಕೆ ದೀರ್ಘ ಕಾಲ ಬಾಹ್ಯಾಕಾಶದಲ್ಲಿ ಇರಬೇಕಾದ ಅನಿವಾರ್ಯತೆ ಅವರಿಗೆ ಬಂತು. ಕೆಲವೇ ದಿನಗಳ ಆ ಯಾತ್ರೆ ಒಂಬತ್ತು ತಿಂಗಳ ತನಕ ಮುಂದೂಡುತ್ತದೆ. ಆ ದಿನಗಳು ಜಗತ್ತೇ ತಲ್ಲಣಗೊಂಡಿತ್ತು. ಅಂತಹ ಆತಂಕದ ಕ್ಷಣವನ್ನು ಎದುರಿಸಿ ಮಾರ್ಚ್ 2025ರಲ್ಲಿ ಮರಳುತ್ತಾರೆ. ಅದಾಗಿ ಕೆಲವು ತಿಂಗಳು ಕಳೆದಿದೆ ಅಷ್ಟೆ, 2025 ಡಿಸೆಂಬರ್ 27ರಂದು ನಿವೃತ್ತಿಯನ್ನು ಘೋಷಿಸಿದ್ದಾರೆ. ನಾಸಾದಲ್ಲಿ 27 ವರ್ಷಗಳ ಕಾಲ ಉತ್ಸಾಹದಿಂದ ಕೆಲಸ ಮಾಡಿದ ಅವರು, ಜಗತ್ತಿನ ಕೆಲವು ಮೊದಲುಗಳನ್ನು ದಾಖಲಿಸಿ, ಇತಿಹಾಸವನ್ನು ಬರೆದಿದ್ದಾರೆ.

ತಮ್ಮ ಸೇವಾ ಅವಧಿಯಲ್ಲಿ ಸುಮಾರು 608 ದಿನಗಳ ಕಾಲ ಬಾಹ್ಯಾಕಾಶದಲ್ಲಿ ಜೀವಿಸಿದ್ದಾರೆ. ನಾಸಾ ಪೈಕಿ ಅತಿ ಹೆಚ್ಚುಕಾಲ ಬಾಹ್ಯಾಕಾಶದಲ್ಲಿ ನೆಲೆಸಿದವರಲ್ಲಿ ಸುನಿತಾ ಎರಡನೆಯವರು. ಸ್ಪೇಸ್ ವಾಕ್‌ನಲ್ಲಿ ಮೊದಲಿಗರು ಎಂಬ ದಾಖಲೆಯನ್ನು ನಿರ್ಮಿಸಿದ್ದಾರೆ. ಒಟ್ಟು ಒಂಬತ್ತು ಬಾರಿ ಸ್ಪೇಸ್ ವಾಕ್ ಮಾಡಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಮಹಿಳಾ ಗಗನಯಾತ್ರಿ ಕೈಗೊಂಡ ಅತಿಹೆಚ್ಚು ಸ್ಪೇಸ್ ವಾಕರ್ ಸುನಿತಾ. ಬಾಹ್ಯಾಕಾಶದಲ್ಲಿ 62 ಗಂಟೆ 6 ನಿಮಿಷಗಳ ಕಾಲ ನೌಕೆಯಿಂದಾಚೆ ಬಂದು ಕೆಲಸ ಮಾಡಿದ್ದಾರೆ. ಬಾಹ್ಯಾಕಾಶ ನಿಲ್ದಾಣದಲ್ಲಿ ಟ್ರೆಡ್‌ಮಿಲ್ ಮೇಲೆ ಮ್ಯಾರಥಾನ್ ಮಾಡಿದ ಕೀರ್ತಿಗೂ ಭಾಜನರಾಗಿದ್ದಾರೆ.

ಇತ್ತೀಚೆಗೆ ಭಾರತಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ‘ನನ್ನ ತಂದೆ ಭಾರತದವರು ಹಾಗೂ ತಾಯಿ ಸ್ಲೊವೇನಿಯಾದವರು. ಎರಡೂ ದೇಶಗಳನ್ನು ತಮ್ಮ ಮನೆ ಎಂದೇ ಕರೆಯುತ್ತೇನೆ’ ಎಂದಿದ್ದರು. ಬಾಹ್ಯಾಕಾಶಯಾನದಲ್ಲಿ ದುರಂತ ಅಂತ್ಯ ಕಂಡ ಕಲ್ಪನಾ ಚಾವ್ಲಾ ಅವರ ಕುಟುಂಬದವರನ್ನು ಭೇಟಿಯಾಗಿದ್ದರು.

ಬಾಹ್ಯಾಕಾಶ ಅನ್ವೇಷಣೆ ಕ್ಷೇತ್ರದ ಭವಿಷ್ಯವನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿರುವ ಸುನಿತಾ ವಿಲಿಯಮ್ಸ್ ಮಾನವಸಹಿತ ಗಗನಯಾನದ ಪ್ರವರ್ತಕರಲ್ಲಿ ಒಬ್ಬರು ಎಂದು ನಾಸಾ ಆಡಳಿತ ಮಂಡಳಿ ಅವರ ಕಾರ್ಯವೈಖರಿಗೆ ಪ್ರಶಂಸೆಯನ್ನು ವ್ಯಕ್ತಪಡಿಸಿದೆ. ■




Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65